# ಅನುಬಂಧ

## ಸರ್ಕಾರದ ಆದೇಶ ಸಂಖ್ಯೆ: ಇಡಿ 77 ಟಿಇಸಿ 2026, ದಿನಾಂಕ: 25.06.2026

## ಸರ್ಕಾರಿ/ವಿಶ್ವವಿದ್ಯಾಲಯ/ಖಾಸಗಿ ಅನುದಾನಿತ/ಖಾಸಗಿ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳು (ಬೋಧನಾ ಶುಲ್ಕ ನಿಗಧಿ)

| ಕೋರ್ಸಿನ ಹೆಸರು | ಸರ್ಕಾರಿ ಕಾಲೇಜುಗಳು (ಶೇ.100 ಸರ್ಕಾರಿ ಕೋಟಾದ ಸೀಟುಗಳು) ಮೈಸೂರು ವಿಶ್ವವಿದ್ಯಾಲಯದ 50% ಸೀಟುಗಳು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ ಘಟಕ ಕಾಲೇಜುಗಳ 50% ಸೀಟುಗಳು ಶುಲ್ಕ (ವಿ.ವಿ ಶುಲ್ಕ + ಇತರೆ ಶುಲ್ಕ ಸೇರಿದಂತೆ) | ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ (UVCE) (ವಿ.ವಿ ಶುಲ್ಕ + ಇತರೆ ಶುಲ್ಕ ಸೇರಿದಂತೆ) | ಖಾಸಗಿ ಅನುದಾನಿತ ಕಾಲೇಜುಗಳು/ ಖಾಸಗಿ ವಿಶ್ವವಿದ್ಯಾಲಯದ ಅನುದಾನಿತ ಕೋರ್ಸ್ ಶುಲ್ಕ (ವಿ.ವಿ ಶುಲ್ಕ + ಇತರೆ ಶುಲ್ಕ ಸೇರಿ) | | ಖಾಸಗಿ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿನ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕ (ವಿ.ವಿಯ ನೋಂದಣಿ, ಶುಲ್ಕ ಹೊರತುಪಡಿಸಿ) (ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳು) | | | ಖಾಸಗಿ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿನ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕ (ವಿ.ವಿಯ ನೋಂದಣಿ, ಶುಲ್ಕ ಹೊರತುಪಡಿಸಿ) (ಅಲ್ಪಸಂಖ್ಯಾತ ಸಂಸ್ಥೆಗಳು) | | |
|---|---|---|---|---|---|---|---|---|---|---|
| | | | ಶೇಕಡ 95 ರಷ್ಟು ಸರ್ಕಾರಿ ಕೋಟಾದ ಸೀಟುಗಳು (ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ) | ಶೇಕಡ 5 ರಷ್ಟು ಆಡಳಿತ ಮಂಡಳಿ ಕೋಟಾದ ಸೀಟುಗಳು | ಸರ್ಕಾರಿ ಕೋಟಾದ ಸೀಟುಗಳು | COMED-K ಕೋಟಾದ ಸೀಟುಗಳು | ಆಡಳಿತ ಮಂಡಳಿ ಕೋಟಾದ ಸೀಟುಗಳು | ಸರ್ಕಾರಿ ಕೋಟಾದ ಸೀಟುಗಳು | KLRMPCA / APMCK ಕೋಟಾದ ಸೀಟುಗಳು | ಆಡಳಿತ ಮಂಡಳಿ ಕೋಟಾದ ಸೀಟುಗಳು |
| | | | | | ಶೇ.45% ಸೀಟುಗಳು | ಶೇ.30% ಸೀಟುಗಳು | ಶೇ.25% ಸೀಟುಗಳು (15+10) | ಶೇ.40% ಸೀಟುಗಳು | ಶೇ.30% ಸೀಟುಗಳು | ಶೇ.30% ಸೀಟುಗಳು (20+10) |
| 1 | 2 | 3 | 4 | 5 | 6 | 7 | 8 | 9 | 10 | 11 |
| ಇಂಜಿನಿಯರಿಂಗ್/ ಆರ್ಕಿಟೆಕ್ಚರ್ (ಸ್ನಾತಕ) | ರೂ.47,100/-* | ರೂ.56,500/-* | ರೂ.47,100/-* | ಸಮ್ಮತಾ ಭಿಪ್ರಾಯದ ಒಪ್ಪಂದದನ್ವಯ ಶುಲ್ಕ ನಿಗಧಿಪಡಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸ ತಕ್ಕದ್ದು. | ರೂ.88,000/- # **ಅಥವಾ** ರೂ.98,000/-# | ರೂ. 2,15,000/-# **ಅಥವಾ** ರೂ.3,02,000/-# ಮಿತಿಗೊಳಪಟ್ಟು | ಸಮ್ಮತಾ ಭಿಪ್ರಾಯದ ಒಪ್ಪಂದದನ್ವಯ ಶುಲ್ಕ ನಿಗಧಿಪಡಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು. | ರೂ.88,000/# **ಅಥವಾ** ರೂ.98,000/# | ರೂ.2,15,000/-# **ಅಥವಾ** ರೂ. 3,02,000/- # ಮಿತಿಗೊಳಪಟ್ಟು | ಸಮ್ಮತಾ ಭಿಪ್ರಾಯದ ಒಪ್ಪಂದದನ್ವಯ ಶುಲ್ಕ ನಿಗಧಿಪಡಿಸಿ ವೆಬ್‌ಸೈಟ್ ನಲ್ಲಿ ಪ್ರಕಟಿಸ ತಕ್ಕದ್ದು. |

- ಶೇ. 5 ರಷ್ಟು ಸಂಖ್ಯಾತಿರಿಕ್ತ ಸೀಟುಗಳಿಗೆ (supernumerary quota) ಪ್ರವೇಶಾತಿ ಪಡೆಯುವ ಅಭ್ಯರ್ಥಿಗಳಿಗೆ ಬೋಧನಾ ಶುಲ್ಕ ಪಾವತಿಸುವುದರಿಂದ ವಿನಾಯಿತಿ ಇರುತ್ತದೆ.

- ಅನುದಾನರಹಿತ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಪ್ರತಿ ವಿದ್ಯಾರ್ಥಿಯಿಂದ ಇತರೆ ಶುಲ್ಕವಾಗಿ ವಾರ್ಷಿಕ ರೂ.20,000/-ಗಳನ್ನು ಮೀರದಂತೆ ಪ್ರಥಮ ವರ್ಷದ ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿಯೇ ಪಾವತಿಸತಕ್ಕದ್ದು. ಇತರೆ ಶುಲ್ಕವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ನೀಡಿರುವ ಅನುಮೋದಿತ ಮೊತ್ತವನ್ನು ಮಾತ್ರ ಪಡೆಯತಕ್ಕದ್ದು. ತದನಂತರದ ವರ್ಷಗಳಲ್ಲಿ ಆಯಾಯ ಕಾಲೇಜುಗಳಲ್ಲಿಯೇ ಪಾವತಿಸುವುದು. ಈ ಶುಲ್ಕಕ್ಕೆ Break up ನ್ನು ಕಾಲೇಜುಗಳಿಂದ ಪಡೆದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ಜಾಲತಾಣದಲ್ಲಿ ಹಾಗೂ ಆಯಾಯ ಕಾಲೇಜುಗಳ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಆಯಾಯ ಕಾಲೇಜುಗಳ ಪ್ರಾಂಶುಪಾಲರುಗಳು ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.
- ಶುಲ್ಕ ನಿಗಧಿಪಡಿಸುವಾಗ ರೂ.50/- ಮತ್ತು ಅದಕ್ಕಿಂತ ಹೆಚ್ಚಾಗಿರುವ ಮೊತ್ತವನ್ನು ಮುಂದಿನ ರೂ. 100/- ರ ಪೂರ್ಣಾಂಕಕ್ಕೆ ಹಾಗೂ ರೂ 50/- ಕ್ಕಿಂತ ಕಡಿಮೆ ಇದ್ದಲ್ಲಿ ಹಿಂದಿನ ರೂ. 100/- ರ ಪೂರ್ಣಾಂಕಕ್ಕೆ ಪರಿಗಣಿಸಲಾಗಿದೆ.

* ಸರ್ಕಾರಿ ಕಾಲೇಜುಗಳು, ಮೈಸೂರು ವಿಶ್ವವಿದ್ಯಾಲಯದ 50% ಸೀಟುಗಳು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು, ಖಾಸಗಿ ಅನುದಾನಿತ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ವಿಶ್ವವಿದ್ಯಾಲಯದ ಶುಲ್ಕ ಮತ್ತು ಇತರೆ ಶುಲ್ಕ ಸೇರಿದಂತೆ ಮೊದಲನೇ ವರ್ಷಕ್ಕೆ ರೂ.47,100/- ಮತ್ತು ತದನಂತರ ವರ್ಷಗಳಿಗೆ ರೂ.37,100/-ಗಳನ್ನು ಪ್ರತಿ ವಿದ್ಯಾರ್ಥಿಯಿಂದ ಪಡೆಯಲು ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

* ದಿನಾಂಕ 25ನೇ ಮಾರ್ಚ್ 2021ರಲ್ಲಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ ಅಧಿನಿಯಮ, 2021ರನ್ವಯ IIT ಮಾದರಿಯಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯವಾಗಿರುವ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ (ಯು.ವಿ.ಸಿ.ಇ) ಬೆಂಗಳೂರು ಸಂಸ್ಥೆಯಲ್ಲಿನ ಇಂಜಿನಿಯರಿಂಗ್ ಕೋರ್ಸುಗಳಿಗೆ ಮೊದಲನೇ ವರ್ಷಕ್ಕೆ ರೂ. 56,500/- (ಎಲ್ಲಾ ರೀತಿಯ ಶುಲ್ಕಗಳನ್ನು ಒಳಗೊಂಡಂತೆ) ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ ಮತ್ತು ತದನಂತರ ವರ್ಷಗಳಿಗೆ ರೂ.53,250/-ಗಳನ್ನು ಪ್ರತಿ ವಿದ್ಯಾರ್ಥಿಯಿಂದ ಪಡೆಯಲು ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯಕ್ಕೆ (UVCE) ನಿಗದಿಪಡಿಸಿರುವ ಶುಲ್ಕದಲ್ಲಿ ರೂ.33,600/-ಗಳನ್ನು ಬೋಧನಾ ಶುಲ್ಕವೆಂದು ಪರಿಗಣಿಸತಕ್ಕದ್ದು.

# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಅಧೀನದ ಘಟಕ ಕಾಲೇಜುಗಳಲ್ಲಿ ಹಾಗೂ ಮೈಸೂರು ವಿಶ್ವವಿದ್ಯಾಲಯವು ನಡೆಸುತ್ತಿರುವ ಸ್ನಾತಕ ಇಂಜಿನಿಯರಿಂಗ್ ಕೋರ್ಸುಗಳ ಶೇಕಡ 100 ರಷ್ಟು ಸೀಟುಗಳ ಪೈಕಿ ಶೇ. 50 ರಷ್ಟು ಶುಲ್ಕವನ್ನು ಸರ್ಕಾರಿ ಕೋಟಾದ ಸೀಟುಗಳಿಗೆ ಅನ್ವಯವಾಗುವ ಶುಲ್ಕವನ್ನು ಹಾಗೂ ಉಳಿದ ಶೇ.50 ರಷ್ಟು ಸೀಟುಗಳಿಗೆ 2026-27ನೇ ಸಾಲಿನಲ್ಲಿ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಸೀಟುಗಳಿಗೆ ನಿಗದಿಪಡಿಸಿರುವ ಕನಿಷ್ಟ ಶುಲ್ಕ (Lower Limit fee) ರೂ.88,000/- + ಸ್ಕಿಲ್ ಶುಲ್ಕವನ್ನು (ಐಚ್ಛಿಕವಾಗಿ) ಮಾತ್ರ ಪಡೆಯತಕ್ಕದ್ದು.

\# ಖಾಸಗಿ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಸರ್ಕಾರವು ನಿಗಧಿಪಡಿಸಿರುವ ರೂ.88,000/-ಗಳನ್ನು ಸಂಸ್ಥೆಗಳು ಪಡೆದಲ್ಲಿ ಕಾಮೆಡ್-ಕೆ ಕೋಟಾದ ಸೀಟುಗಳಿಗೆ ರೂ.3,02,000/-ಗಳನ್ನು ಪಡೆಯತಕ್ಕದ್ದು ಹಾಗೆಯೇ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಸರ್ಕಾರವು ನಿಗಧಿಪಡಿಸಿರುವ ರೂ.98,000/- ಗಳನ್ನು ಸಂಸ್ಥೆಗಳು ಪಡೆದಲ್ಲಿ ಕಾಮೆಡ್-ಕೆ ಕೋಟಾದ ಸೀಟುಗಳಿಗೆ ರೂ.2,15,000/-ಗಳನ್ನು ಪಡೆಯತಕ್ಕದ್ದು ಹಾಗೂ ಈ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

25/06/2026

**(ಸುನೀತಾ ಆರ್. ಬೇದರೆ)**
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)